ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	508
2)	ಮಾನ್ಯ ಸದಸ್ಯರ ಹೆಸರು	ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3)	ಉತ್ತರಿಸಬೇಕಾದ ದಿನಾಂಕ	21/02/2022
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು.

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಹಾಗೂ ಅನುದಾನಿತ ಐ.ಟಿ.ಐ. ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ಸಂಖ್ಯೆ ಎಷ್ಟು; (ವರ್ಗವಾರು, ವಿಷಯವಾರು ವಿವರ ನೀಡುವುದು)	ಸರ್ಕಾರಿ ಐಟಿಐ ಸಂಸ್ಥೆಗಳಲ್ಲಿ ಒಟ್ಟು 1671 ಮತ್ತು ಅನುದಾನಿತ ಐಟಿಐ ಸಂಸ್ಥೆಗಳಲ್ಲಿ 135 ಬೋಧಕ ಹುದ್ದೆಗಳು ಖಾಲಿ ಇರುತ್ತವೆ (ಅನುಬಂಧ-1 ಮತ್ತು ಅನುಬಂಧ-2)
ಆ)	ಯಾವ ಅವಧಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು;	ಕರ್ನಾಟಕ ಲೋಕಸೇವಾ ಆಯೋಗದಿಂದ 1520 ಕಿರಿಯ ತರಬೇತಿ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, 46 ಕಿರಿಯ ತರಬೇತಿ ಅಧಿಕಾರಿಗಳ ಅಂತಿಮ ಆಯ್ಕೆಪಟ್ಟಿ ಇಲಾಖೆಯಲ್ಲಿ ಸ್ವೀಕೃತಗೊಂಡಿದ್ದು, ಸಧ್ಯದಲ್ಲೇ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು. ಕೆಪಿಎಸ್‌ಸಿಯು 1296 ಕಿರಿಯ ತರಬೇತಿ ಅಧಿಕಾರಿಯವರ ತಾತ್ಕಾಲಿಕ ಪಟ್ಟಿ ಪ್ರಕಟಿಸಿದ್ದು, ಫೆಬ್ರವರಿ 2022 ರ ಒಳಗಾಗಿ ಅಂತಿಮ ಆಯ್ಕೆ ಪಟ್ಟಿ ಕಳುಹಿಸಲಾಗುವುದೆಂದು ತಿಳಿಸಿರುತ್ತಾರೆ. ಅಂತಿಮ ಆಯ್ಕೆ ಪಟ್ಟಿ ಸ್ವೀಕೃತಗೊಂಡ ನಂತರ ಮೂಲ ದಾಖಲೆಗಳನ್ನು ಪರಿಶೀಲಿಸಿಕೊಂಡು ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿ ಖಾಲಿ ಇರುವ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗಳಿಗೆ ನಿಯುಕ್ತಿಗೊಳಿಸಲಾಗುವುದು. ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ನಿಯಮಾನುಸಾರ ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಅನುದಾನ ಸಂಹಿತೆಯ ನಿಯಮಾನುಸಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಸೂಕ್ತ ಕ್ರಮವಹಿಸಲಾಗುವುದು.
ಇ)	ಸರ್ಕಾರಿ ಐ.ಟಿ.ಐ.ಗಳಲ್ಲಿ ಅತಿಥಿ / ಹೊರ ಗುತ್ತಿಗೆ ಆಧಾರದ ಮೇಲೆ ಬೋಧಕ ಹುದ್ದೆಗಳಿಗೆ ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ;	2021-22ನೇ ಸಾಲಿಗೆ 902 ಅತಿಥಿ ಬೋಧಕರನ್ನು ನೇಮಿಸಿಕೊಳ್ಳಲಾಗಿದೆ.
ಈ)	ಸದರಿಯವರಿಗೆ ಎಷ್ಟು ಬೋಧನ ಅವಧಿಯನ್ನು ನಿಗದಿಗೊಳಿಸಲಾಗಿದೆ;	ದಿನ ಒಂದಕ್ಕೆ 4 ಗಂಟೆಯಂತೆ ವಾರದ 6 ದಿನಗಳು (ಸರ್ಕಾರಿ ರಜೆಗಳನ್ನು ಹೊರತುಪಡಿಸಿ)
ಉ)	ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಗೌರವಧನ ಎಷ್ಟು;	ಗಂಟೆಗೆ ರೂ.100/-ರಂತೆ, ದಿನವೊಂದಕ್ಕೆ 4 ಗಂಟೆಗೆ ಸೀಮಿತಗೊಳಿಸಿ ಮಾಸಿಕವಾಗಿ ರೂ.9600/- ರಿಂದ ರೂ.10400/-ರವರೆಗೆ ಕಾರ್ಯ ನಿರತ ಗಂಟೆಗಳ ಆಧಾರದ ಮೇಲೆ ಗೌರವಧನ ನೀಡಲಾಗುತ್ತಿದೆ.
ಊ)	ಸದರಿ ಗೌರವಧನವನ್ನು ಹೆಚ್ಚಿಸಲು ಸರ್ಕಾರ ಚಿಂತಿಸುವುದೇ?	ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಕೌಉಜೀಇ 12 ಕೈತಪ್ರ 2022

(ಡಾ.ಸಿ.ಎನ್.ಅಶ್ವತ್ಥ ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಅನುಬಂಧ-1

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ವಿವರ

ಕ್ರ ಸಂ	ವೃತ್ತಿಗಳು	ಒಟ್ಟು
1	ಫಿಟ್ಟರ್	348
2	ಟರ್ನರ್	85
3	ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್	133
4	ಮೆಕ್ಯಾನಿಕ್ ಮೋಟಾರ್ ವೆಹಿಕಲ್	99
5	ಐಸಿಟಿಎಸ್ಎಂ (ಐಟಿ&ಇಎಸ್ಎಂ)	77
6	ಮೆಕ್ಯಾನಿಕ್ ರೆಫ್ರಿಜರೇಷನ್ & ಏರ್-ಕಂಡೀಷನಿಂಗ್	94
7	ವರ್ಕ್‌ಶಾಪ್ ಕ್ಯಾಲ್ಕ್ಯುಲೇಷನ್ & ಸೈನ್ಸ್	150
8	ಇಂಜಿನಿಯರಿಂಗ್ ಡ್ರಾಯಿಂಗ್	98
9	ಮೆಕ್ಯಾನಿಕ್ ಡೀಸೆಲ್	49
10	ಇನ್‌ಸ್ಟ್ರುಮೆಂಟ್ ಮೆಕಾನಿಕ್	4
11	ಎಲೆಕ್ಟ್ರೋಪ್ಲೇಟರ್	1
12	ಎಲೆಕ್ಟ್ರೀಷಿಯನ್	288
13	ಡ್ರೆಸ್ ಮೇಕಿಂಗ್	31
14	ಇಂಟೀರಿಯರ್ ಡಿಸೈನ್ & ಡೆಕೊರೇಷನ್	10
15	ಡ್ರಾಫ್ಟ್‌ಮ್ಯಾನ್ ಸಿವಿಲ್	4
16	ವೆಲ್ಡರ್	16
17	ಮೆಷಿನಿಸ್ಟ್	5
18	ಆರ್ಕಿಟೆಕ್ಚರಲ್ ಅಸಿಸ್ಟೆಂಟ್	7
19	ಕಾರ್ಪೆಂಟರ್	2
20	ಡ್ರಾಫ್ಟ್‌ಮ್ಯಾನ್ ಮೆಕ್ಯಾನಿಕಲ್	9
21	ಮೆಕ್ಯಾನಿಕ್ ಮೆಷಿನ್ ಟೂಲ್ ಮೈನ್‌ಟೆನೆನ್ಸ್ (ಮಿಲ್ ವ್ರೈಟ್ ಮೆಕ್ಯಾನಿಕ್	7
22	ಸೆಕ್ರೆಟರಿಯಲ್ ಪ್ರಾಕ್ಟೀಸ್	2
23	ಪ್ಲಾಸ್ಟಿಕ್ ಪ್ರೋಸೆಸಿಂಗ್ ಆಪರೇಟರ್	1
24	ಕೋಪಾ	80
25	ಟ್ರ್ಯಾಕ್ಟರ್ ಮೆಕ್ಯಾನಿಕ್	2
26	ಎಂ ಸಿ ಇ	8
27	ಎಂ ಸಿ ಹೆಚ್	1
28	ಎಂ ಸಿ ಹೆಚ್ ಎನ್	1
29	ಟಿ ಡಿ ಎಂ	10
30	ಎಂ ಡಿ ಟಿ ಎಸ್	2
31	ಡಿ ಸಿ ಎಂ	5
32	ಮೌಲ್ಡರ್	1
33	ಕಟ್ಟಿಂಗ್ & ಸ್ಯೂಯಿಂಗ್	7
34	ಮೆಕ್ಯಾನಿಕ್ ಗ್ರೈಂಡರ್	9
35	ಸ್ಟೆನೋ	3
36	ಎಸ್ ಎಂ ಡಬ್ಲ್ಯೂ	4
37	ಐ ಡಿ ಡಿ	11
38	ಎಂ ಎ ಇ ಇ	7
	ಒಟ್ಟು	1671

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಅನುಬಂಧ–2

ಖಾಸಗಿ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ವಿವರ

ಕಿರಿಯ ತರಬೇತಿ ಅಧಿಕಾರಿಗಳ ಖಾಲಿ ಹುದ್ದೆಗಳ ವಿವರ	
ಹುದ್ದೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ
ಫಿಟ್ಟರ್	44
ಎಲೆಕ್ಟ್ರೀಷಿಯನ್	23
ಎಲೆಕ್ಟ್ರಾನಿಕ್ ಮೆಕ್ಯಾನಿಕ್	13
ಡ್ರಾಫ್ಟ್‌ಮೆನ್ ಮೆಕ್ಯಾನಿಕ್ (ಡಿ.ಎಂ.ಎಂ)	10
ಡೀಸೆಲ್ ಮೆಕ್ಯಾನಿಕ್	01
ಟರ್ನರ್	06
ಎಂ.ಎಂ.ವಿ.	04
ವೆಲ್ಡರ್	08
ಸರ್ವೆಯರ್	01
ಕಟಿಂಗ್ & ಸ್ಯೂಯಿಂಗ್ ಟೆಕ್ನಾಲಜಿ	03
ಕಿರಿಯ ತರಬೇತಿ ಅಧಿಕಾರಿ (ಕಾರ್ಯಗಾರ ಲೆಕ್ಕ & ವಿಜ್ಞಾನ & ಇಂಜಿನಿಯರಿಂಗ್ ಡ್ರಾಯಿಂಗ್)	14
ಡ್ರಾಫ್ಟ್‌ಮೆನ್ ಸಿವಿಲ್ (ಡಿ.ಎಂ.ಸಿ)	05
ಟ್ರ್ಯಾಕ್ಟರ್ ಮೆಕ್ಯಾನಿಕ್	01
ಎಂ.ಆರ್.ಎ.ಸಿ	01
ಮೆಷಿನಿಷ್ಟ್	01
ಒಟ್ಟು ಕಿರಿಯ ತರಬೇತಿ ಅಧಿಕಾರಿಗಳ ಖಾಲಿ ಹುದ್ದೆ	135

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.